ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 34097 3ನೇ ದರ್ಜೆ ಮತ್ತು 4ನೇ ದರ್ಜೆ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. 5990 ಹುದ್ದೆಗಳು ಖಾಲಿ ಇವೆ.

2172 3ನೇ ಮತ್ತು 4ನೇ ದರ್ಜೆ ಹುದ್ದೆಗಳ ಭರ್ತಿಗಾಗಿ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಕರೆಯಲಾಗಿದೆ. ಮುಂದಿನ ಕ್ರಮವು ಪ್ರಗತಿಯಲ್ಲಿದೆ. ಬಡ್ತಿ ಮೂಲಕ ಭರ್ತಿ ಮಾಡುವ ಹುದ್ದೆಗಳನ್ನೂ ಸಹ ಆಗಿಂದಾಗ್ಗೆ ಭರ್ತಿ ಮಾಡಲಾಗುತ್ತದೆ.

ಕೃಷಿ ಮಾರುಕಟ್ಟೆಗೆ ಬಿಡುಗಡೆಯಾಗಿರುವ ಹಣ

444- ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಕೃಷಿಮಾರುಕಟ್ಟೆ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಆ) ನಿವೇಶನ ಇದ್ದರೂ ಕಾಮಗಾರಿ ಕೈಗೊಳ್ಳದಿರಲು ಕಾರಣವೇನು?

ಇ) ಇದನ್ನು ಯಾವಾಗ ಪ್ರಾರಂಭಮಾಡಲಾಗುವುದು?

ಶ್ರೀ ಆರ್.ಬಿ. ತಿಮ್ಮಾಪೂರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಕೊಡಗು ಜಿಲ್ಲೆಯ ಸೋಮವಾರಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಕೇಂದ್ರ ಧನ ಸಹಾಯ ರೂ 2,50,000-00 ಹಾಗೂ ಸಾಲವಾಗಿ ರೂ 56,52,000-00 ಹೀಗೆ ಒಟ್ಟು ರೂ 59,02,000ಗಳ ಹಣ ಬಿಡುಗಡೆ ಮಾಡಲಾಗಿದೆ.

ಆ) ಉಪ ಮಾರುಕಟ್ಟೆ ಪ್ರಾಂಗಣಕ್ಕಾಗಿ ಸೋಮವಾರಪೇಟೆ ತಾಲ್ಲೂಕಿನಲ್ಲಿ 7.82 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಸದರಿ ಜಮೀನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೋಮವಾರಪೇಟೆ ಇವರ ಹೆಸರಿಗೆ ಇನ್ನು ಖಾತೆ ವರ್ಗಾವಣೆಯಾಗಿರುವುದಲ್ಲ. ಭೂಮಾಲೀಕರಿಗೆ ಹೆಚ್ಚಿನ ಪರಿಹಾರ ಪಾವತಿ ಬಗ್ಗೆ ಉಚ್ಛ ನ್ಯಾಯಾಲಯದಲ್ಲಿದೆ. ಜೊತೆಗೆ ಸಮಿತಿಯು ಆರ್ಥಿಕವಾಗಿ ಸಧೃಢವಾಗಿಲ್ಲದ ಕಾರಣ ಉಪ ಮಾರುಕಟ್ಟೆ ಸೋಮವಾರಪೇಟೆ ಪ್ರಾಂಗಣದಲ್ಲಿ ಇನ್ನೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಇ) ಸೋಮವಾರಪೇಟೆ ತಾಲ್ಲೂಕಿನಲ್ಲಿ ಹೊಸದಾಗಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನಿನ ಭೂ ಮಾಲೀಕರಿಗೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಅಂತಿಮ ತೀರ್ಪು ಬಂದ ನಂತರ ಮತ್ತು ಕಾರ್ಯದರ್ಶಿಯವರ ಹೆಸರಿಗೆ ಖಾತೆ ವರ್ಗಾವಣೆ ಆದನಂತರ ಹಾಗೂ ಸರ್ಕಾರದಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ದೊರೆತ ನಂತರ ಅಭಿವೃದ್ಧಿ ಕಾಮಕಾರಿಗಳನ್ನು ಕೈಗೊಳ್ಳಲಾಗುವುದು.